




ಹಂಬಲಿಸಿದ್ದಾರೆ. ಆ ಹಂಬಲದ ಫಲವಾಗಿಯೇ ರವಿವರ್ಮನ ಹನ್ನೆರಡು ಸುಂದರಿಯರು ಹೊಸ ಕಾಲದಲ್ಲಿ, ಹೊಸ ಜೀವದಲ್ಲಿ ಮೂಡಿಬಂದಿದ್ದಾರೆ.

ಆಗಿರುವುದಿಷ್ಟು, ದಕ್ಷಿಣ ಭಾರತ ಚಿತ್ರರಂಗದ ನಟಿಯರು ಹಾಗೂ ನೃತ್ಯಗಾತಿಯರಿಗೆ, ರವಿವರ್ಮನ ಕಲಾಕೃತಿಗಳಲ್ಲಿನ ಚೆಲುವೆಯರ ಪೋಷಾಕು ತೊಡಿಸಿ ಕ್ಯಾಮೆರಾ ಮೂಲಕ ವೆಂಕಟ್ ಕಣ್ಣು ಮಿಟುಕಿಸಿದ್ದಾರೆ. ಹನ್ನೊಂದು ಕಲಾವಿದೆಯರನ್ನು ರೂಪದರ್ಶಿಗಳನ್ನಾಗಿಸಿಕೊಂಡು ಹನ್ನೆರಡು ಫೋಟೊಗಳನ್ನು ರೂಪಿಸಿದ್ದಾರೆ.

ರೂಪಾಂತರದ ಪ್ರಯೋಗಕ್ಕೆ ತಮ್ಮನ್ನೊಡ್ಡಿಕೊಂಡ ಕಲಾವಿದೆಯರಲ್ಲಿ ಮಾಗಿದ ಚೆಲುವಿನ ಕಲಾವಿದೆಯರೂ ಇದ್ದಾರೆ, ನವಜವ್ವನೆಯರೂ ಇದ್ದಾರೆ. ಖುಷ್ಬೂ, ಶ್ರುತಿ ಹಾಸನ್, ರಮ್ಯ ಕೃಷ್ಣ, ಐಶ್ವರ್ಯಾ ರಾಜೇಶ್, ಸಮಂತಾ ಅಕ್ಕಿನೇನಿ, ನಾದಿಯಾ, ಲಿಸ್ಸಿ ಲಕ್ಷ್ಮಿ, ಪ್ರಿಯದರ್ಶಿನಿ ಗೋವಿಂದ್, ಲಕ್ಷ್ಮಿ ಮಂಚು, ಚಾಮುಂಡೇಶ್ವರಿ – ಹೀಗೆ ಖ್ಯಾತನಾಮೆಯರು ರವಿವರ್ಮನ ಚೆಲುವೆಯರನ್ನು ಜೀವಿಸಿದ್ದಾರೆ.

ಶ್ರುತಿ ಹಾಸನ್ ಅವರಿಗೆ ದ್ವಿಪಾತ್ರ ಅಭಿನಯದ ಸಂಭ್ರಮ; ಕುರುಪಂನ ರಾಣಿಯಾಗಿ ಹಾಗೂ ಕೊಳದ ಬಳಿ ಚಂದ್ರಕಾಂತಿಯಲ್ಲಿ ಮೀಯುವ ರಾಧೆಯಾಗಿ ಅವರು ಕಾಣಿಸಿಕೊಂಡಿದ್ದಾರೆ. ಜೀವಫಲದ ಫಲವಂತಿಕೆಯನ್ನು ಬಿಂಬಿಸುವ ಹೆಣ್ಣಿನ ರೂಪದಲ್ಲಿ ಸಮಂತಾ ಕಂಗೊಳಿಸಿದ್ದರೆ, ಖುಷ್ಬೂ ಮಹಾರಾಷ್ಟ್ರದ ಪ್ರೌಢ ಮಹಿಳೆಯಾಗಿ ಕಾಣಿಸಿಕೊಂಡಿದ್ದಾರೆ. ರಮ್ಯಕೃಷ್ಣ ಅವರದು ಹಂಸದೊಂದಿಗಿನ ಮೌನಸಂಭಾಷಣೆಯ ಪಾತ್ರ.

ಚೆನ್ನೈನ 'ನಾಮ್ ಚಾರಿಟಬಲ್ ಟ್ರಸ್ಟ್'ನ ಕ್ಯಾಲೆಂಡರ್‌ಗಾಗಿ ಈ ಫೋಟೊ ಶೂಟ್ ನಡೆದಿದೆ. ಹಿರಿಯ ಅಭಿನೇತ್ರಿ ಸುಹಾಸಿನಿ ಮಣಿರತ್ನಂ ಅವರಿಂದ ಆರಂಭವಾಗಿರುವ 'ನಾಮ್ ಟ್ರಸ್ಟ್' ತನ್ನ ಹತ್ತನೇ ವರ್ಷದ ವಾರ್ಷಿಕೋತ್ಸವದ ಸಂದರ್ಭದಲ್ಲಿ ವಿಶಿಷ್ಟ ಕ್ಯಾಲೆಂಡರ್ ರೂಪಿಸಿದೆ. ಅಂದಹಾಗೆ, ಈ ಕ್ಯಾಲೆಂಡರ್ ರೂಪಿಸುವಿಕೆ ಕೇವಲ ಪ್ರಯೋಗಶೀಲತೆಯ ಹಂಬಲದಿಂದಾಗಿಯಷ್ಟೇ ನಡೆದಿಲ್ಲ. ಮಹಿಳಾ ಸಬಲೀಕರಣವನ್ನು ಸಂಭ್ರಮಿಸುವ ಮುಖ್ಯ ಉದ್ದೇಶ ಈ ಕ್ಯಾಲೆಂಡರ್ ಪರಿಕಲ್ಪನೆಯ ಹಿನ್ನೆಲೆಯಲ್ಲಿದೆ.

ರವಿವರ್ಮನ ಕಲಾಕೃತಿಗಳನ್ನು ಹೊಸ ರೂಪದಲ್ಲಿ ಅಭಿವ್ಯಕ್ತಿಸುವ ಪ್ರಯತ್ನ ಯಾರಿಗಾದರೂ ಸವಾಲು ಒಡ್ಡುವಂತಹದ್ದು. ಮೂಲ ಕೃತಿಗಳಿಗೆ ಅಪಚಾರವಾಗದಂತೆ, ರೂಪಾಂತರದ ಕೃತಿಗಳನ್ನು ರೂಪಿಸುವುದು ಸುಲಭವಲ್ಲ. ಈ ಸವಾಲಿನಲ್ಲಿ ವೆಂಕಟ್ ಗೆಲುವು ಸಾಧಿಸಿದ್ದಾರೆ. ಕಲಾಪ್ರಕಾರವೊಂದನ್ನು ಹೊಸ ಕಣ್ಣಿನಲ್ಲಿ ನೋಡುವ ಪ್ರಯೋಗಶೀಲತೆಯ ರೂಪದಲ್ಲಿ ಅವರ ಛಾಯಾಚಿತ್ರಗಳು ಘನತೆಯಿಂದ ರೂಪುಗೊಳ್ಳುವ ಮೂಲಕ ಸಹೃದಯರ ಗಮನಸೆಳೆಯುತ್ತವೆ.

ವೆಂಕಟ್ ಅವರ ಪ್ರಯೋಗಕ್ಕೆ ರೂಪದರ್ಶಿಗಳಾಗಿರುವ ಕಲಾವಿದೆಯರಿಗೆ ಕೂಡ ಇದೊಂದು ಹೊಸ ಅನುಭವ. ಕಾಲಚಕ್ರದಲ್ಲಿ ಕೆಲವು ಗಳಿಗೆಗಳ ಕಾಲವಾದರೂ ಹಿಂದಕ್ಕೆ ಚಲಿಸಿದ ಅನುಭವವನ್ನು ಅವರು ಹೊಂದಿರಬಹುದು. ಅವರ ಹೊಸ ಅವತಾರ ಅಭಿಮಾನಿಗಳ ಕಣ್ಮನಗಳಿಗೂ ತಂಪೆರೆಯಬಹುದು. ■

